

# ಮತ್ಸ್ಯ ಕಾಳಗ

■ ವೀರಣ್ಣ ಮಾಶೆಟ್ಟಿ

ಥಾಯ್ಲೆಂಡ್ ಮತ್ತಿತರ ಆಗ್ನೇಯ ಏಷ್ಯಾದ ದೇಶಗಳಲ್ಲಿ ಮೀನುಗಳ ಕಾಳಗಗಳನ್ನು ಏರ್ಪಡಿಸಲಾಗುತ್ತದೆ. ಬೆಟ್ಟಾ ಸ್ಪ್ಲೆಂಡನ್ಸ್ ಮೀನುಗಳು 'ಜಗಳ–ಗಂಟ ಮೀನು'ಗಳೆಂದೇ ಹೆಸರುವಾಸಿ. ಒಂದು ಅಕ್ವೇರಿಯಂ ಪೆಟ್ಟಿಗೆಯೊಳಗೆ ಎರಡು ಗಂಡು ಮೀನುಗಳನ್ನು ಹಾಕಿದರೆ ಜಗಳ ಶತಃಸಿದ್ಧ. ಹರವಿದ ತಮ್ಮ ಬಣ್ಣ ಬಣ್ಣದ ರೆಕ್ಕೆಗಳು ಹರಿದುಹೋಗುವವರೆಗೆ ಈ ಮೀನುಗಳು ಜಗಳಕ್ಕೆ ನಿಲ್ಲುತ್ತವೆ. ಬಲಶಾಲಿ ಗಂಡು ಇನ್ನೊಂದನ್ನು ಕಚ್ಚಿ, ರೆಕ್ಕೆಗಳನ್ನು ಹರಿದು ಹೊರದೂಡುತ್ತದೆ. ಜಗಳದ ಮಧ್ಯೆ ಸೋತ ಮೀನು ತನ್ನ ರೆಕ್ಕೆಗಳನ್ನು ಮಡಚಿ ತಪ್ಪೊಪ್ಪಿಕೊಂಡಂತೆ ಬಾಗಿದರೆ, ಬಲಿಷ್ಠ ಮೀನು ಕಾಳಗವನ್ನು ಬಿಟ್ಟುಕೊಡುತ್ತದೆ. ಥಾಯ್ಲೆಂಡ್‌ನಲ್ಲಿ ಇದೊಂದು ಜನಪ್ರಿಯ ಕ್ರೀಡೆ.

ಆದರೆ ಈ ಜಗಳಕ್ಕೂ ಮೀನುಗಳ ಸಂತಾನೋತ್ಪತ್ತಿಗೂ ಅವಿನಾಭಾವ ಸಂಬಂಧವಿದೆ ಎನ್ನುವುದು ಕುತೂಹಲಕರ ಸಂಗತಿ. ಅಕ್ವೇರಯಂನಲ್ಲಿ ನಡೆಯುವ ಈ ಕಾಳಗದಲ್ಲಿ ಗೆದ್ದ ಗಂಡು ಮೀನು, ಬಳಿಕ ಅದೇ ಅಕ್ವೇರಿಯಂ–ನಲ್ಲಿ ಬಿಡುವ ಹೆಣ್ಣು ಮೀನನ್ನು ಒಲಿಸಿಕೊಳ್ಳಲು ಬಗೆಬಗೆಯ ನರ್ತನವನ್ನು ಮಾಡುತ್ತದೆ. ಬಾಗಿ ಬಳುಕಿ ಬಣ್ಣ ಬಣ್ಣದ ರೆಕ್ಕೆಗಳನ್ನು ಕುಣಿಸಿ ಹೆಣ್ಣು ಮೀನಿನ ಸುತ್ತ ಈಜಾಡುತ್ತದೆ. ಯದ್ವಾ ತದ್ವಾ ಹೆಣ್ಣು ಮೀನಿನ ಸುತ್ತ ಈಜಾಡುತ್ತಾ, ಹೆಣ್ಣಿನ ರೆಕ್ಕೆಗಳನ್ನು ಪದೇ ಪದೇ ಕಚ್ಚಿ ತುಂಡರಿಸುತ್ತದೆ. ಇದು ಕಾಮಕೇಳಿಗೆ ಆಹ್ವಾನವಿತ್ತಂತೆ!

ನಂತರ ಬಾಯಿಂದ ಲೋಳೆ ಪದಾರ್ಥವನ್ನು ಸ್ರವಿಸಿ ಸೋಪಿನ ನೊರೆಯಂತೆ ಊದಿ, ಗುಳ್ಳೆಗಳ ಒಂದು ಗೂಡನ್ನೇ ನಿರ್ಮಿಸುತ್ತದೆ. ಗೂಡಿನ ನಿರ್ಮಾಣದ ನಂತರ ಮೊದಲಿನ ಒರಟು ವರ್ತನೆಯನ್ನು ಬಿಟ್ಟು ನಯವಾದ ವರ್ತನೆಯಿಂದ ಮನದನ್ನೆಯನ್ನು ಒಲಿಸಿ ತಾನು ನಿರ್ಮಿಸಿದ ಗೂಡಿನ ಬಳಿ ಸಾಗುತ್ತದೆ. ಇದಕ್ಕಾಗಿ ಹೆಣ್ಣಿಗಿಂತ ದೊಡ್ಡದಾದ ತನ್ನ ಆಕರ್ಷಕ ರೆಕ್ಕೆಗಳನ್ನು ಬಳುಕಿಸಿ ನರ್ತಿಸಿ ಹೆಣ್ಣು ಮೀನಿನ ಗಮನ ಸೆಳೆಯುತ್ತದೆ.

ಗಂಡಿನ ಮೋಡಿಗೆ ಹೆಣ್ಣು ಮನಸೋತು ಆತನ ಹಿಂದೆ ಗೂಡಿನತ್ತ ಸಾಗುತ್ತದೆ. ಗಂಡಿನ ಮೋಡಿಯಿಂದ ಪ್ರೇರೇಪಿತವಾಗಿ ಹೆಣ್ಣು ಮೀನು ಮೊಟ್ಟೆಗಳನ್ನು ಒಂದೊಂದಾಗಿ ಹೊರದೂಡುತ್ತದೆ. ಮೊಟ್ಟೆಗಳು ಹೊರ–ಬೀಳುತ್ತಿದ್ದಂತೆಯೇ ಗಂಡು ಮೀನು ಅವುಗಳು ಮುಳುಗದಂತೆ ಒಂದೊಂದಾಗಿ ತನ್ನ ಬಾಯಿಯ ಮೂಲಕ ಗೂಡಿನೊಳಕ್ಕೆ ತಳ್ಳುತ್ತದೆ. ಕಡೆಯ ಮೊಟ್ಟೆ ಹೊರಬಿದ್ದಾಗ, ವೀರ್ಯವನ್ನು ಸ್ರವಿಸಿ, ನಿಷೇಚನಗೊಂಡ ಮೊಟ್ಟೆಗಳೆಲ್ಲವನ್ನೂ ತಾನೇ ನಿರ್ಮಿಸಿದ ಗೂಡಿನೊಳಗೆ ಜೋಪಾನ ಮಾಡಿ ಇಡುತ್ತದೆ.

ಮೊಟ್ಟೆ ಇಟ್ಟ ನಂತರ ಹೆಣ್ಣು ತನ್ನ ಮೊಟ್ಟೆಗಳನ್ನು ನುಂಗುವ ನಡವಳಿಕೆ ತೋರುವುದರಿಂದ ಹೆಣ್ಣು ಮೀನನ್ನು ಅಟ್ಟುವ ಕೆಲಸವೂ ಗಂಡು ಮೀನಿನದ್ದು! ಆಕ್ವೇರಿಯಂಗಳಲ್ಲಿ ಮೊಟ್ಟೆಯಿಟ್ಟ ನಂತರ ಹೆಣ್ಣು ಮೀನುಗಳನ್ನು ಬೇರ್ಪಡಿಸುವುದು ಸಾಮಾನ್ಯ. ಬಳಿಕ ಮೊಟ್ಟೆಗಳ ಹಿತ ತಂದೆಗೆ ಬಿಟ್ಟದ್ದು. ಗೂಡಿನಿಂದ ಹೊರಬೀಳುವ ಮೊಟ್ಟೆಗಳನ್ನು ಮತ್ತೆ ಗೂಡಿಗೆ ಸೇರಿಸುತ್ತಾ ಆಗಾಗ ಮತ್ತಷ್ಟು ಗುಳ್ಳೆಗಳಿಂದ ಗೂಡನ್ನು ಕಾಪಾಡುವ ಕೆಲಸವನ್ನು ಗಂಡು ಮೀನು ನೋಡಿಕೊಳ್ಳುತ್ತದೆ. ಆದರೆ ಮೊಟ್ಟೆ ಒಡೆದು ಮರಿಗಳು ಹೊರಬಿದ್ದ ನಂತರ ತನ್ನ ಕಂದಮ್ಮಗಳನ್ನು ನೋಡಿಕೊಳ್ಳುವ ಗಂಡಿನ ಜವಾಬ್ದಾರಿ ಮುಗಿದಂತೆಯೇ. ಕೆಲವೊಮ್ಮೆ ಮರಿಗಳನ್ನು ಗಂಡು ಮೀನೇ ತಿನ್ನುವುದುಂಟು. ಹಾಗಾಗಿ ಮರಿಗಳು ಹೊರಬಂದಾಕ್ಷಣ ಗಂಡು ಮೀನನ್ನು ಅಕ್ವೇರಿಯಂನಿಂದ ಹೊರತಳ್ಳುವ ಕೆಲಸ ಸಾಕಾಣಿಕೆದಾರರದ್ದು.

ಜಗತ್ತಿನ ಎಲ್ಲೆಡೆ ಈ ಮೀನುಗಳಿಗೆ ಭಾರೀ ಬೇಡಿಕೆಯಿದ್ದು, ಇವುಗಳ ಸಾಕಾಣಿಕೆಯೂ ವ್ಯಾಪಕವಾಗಿ ನಡೆದಿದೆ. ಗಂಡು ಮೀನಿನ ಜಗಳದ ಕಥೆ ಜನಪ್ರಿಯವೂ ಆಗಿರುವುದರಿಂದ ಎರಡು ಗಂಡುಗಳನ್ನು ಅಕ್ವೇರಿಯಂನಲ್ಲಿ ಬಿಡುವಾಗ ಹೆಚ್ಚಿನ ಎಚ್ಚರಿಕೆ ವಹಿಸಿ ಪ್ರತ್ಯೇಕವಾಗಿ ಸಾಕಬೇಕಾಗುತ್ತದೆ. ರೆಕ್ಕೆಗಳು ಹರಿದು ಹೋಗದಂತೆ ಹೆಚ್ಚಿನ ಕಾಳಜಿ ವಹಿಸುತ್ತಾರೆ. ಜೀವಜಾಲದ ಒಂದೊಂದು ಸೃಷ್ಟಿಯಲ್ಲೂ ಸಂತಾನೋತ್ಪತ್ತಿಗೆ ನಡೆಯುವ ಕಸರತ್ತುಗಳು ವಿಶಿಷ್ಟವಾಗಿವೆ. ತಮ್ಮ ಅಪೂರ್ವ ಬಣ್ಣಗಳಿಂದ ಮನುಷ್ಯನ ಮನಸ್ಸಿಗೆ ಆಹ್ಲಾದವನ್ನೀಯುವ ಮೀನುಗಳ ಲೋಕ ಅತ್ಯಂತ ನಿಗೂಢವೂ, ಆಕರ್ಷಣೀಯವೂ ಆಗಿದೆ.